1. ಪೊಡೊಸೈಟ್‌ಗಳು ಯಾವ ಅಂಗದಲ್ಲಿದೆ ? ಮತ್ತು ಈ ಕೋಶಗಳ ಕೆಲಸವೇನು ?
(1) ಲಿವರ್ ಮತ್ತು ಡಿಟಾಕ್ಸಿಫಿಕೇಶನ್
(2) ಶ್ವಾಸಕೋಶ ಮತ್ತು ಉಸಿರಾಟ
(3) ಮೂತ್ರಪಿಂಡ ಗ್ಲಾಮರುಲಸ್ ಮತ್ತು ಸಣ್ಣಸಣ್ಣ ಕಣಗಳ ಸೋಸುವಿಕೆ
(4) ಅಂಡಾಶಯ ಮತ್ತು ಪ್ರೊಜೆಸ್ಟಿರಾನ್ ಹಾರ್ಮೋನ್ ಸ್ರವಿಸುವಿಕೆ

2. ಈ ಕೆಳಗಿನ ಯಾವ ಪಾಲಿಮರ್‌ನ್ನು ಕಿಟಕಿಗಳು ಮತ್ತು ಕನ್ನಡಕಗಳ ಅಭಂಜನೀಯ (ಚದರಿಕೆ ಆಗದ) ಮಸೂರಗಳ ತಯಾರಿಕೆಗೆ ಬಳಕೆ ಮಾಡಲಾಗಿದೆ ?
(1) ಪಾಲಿಅಕ್ರಿಲಮೈಡು
(2) ನೈಲಾನ್–6, 6
(3) ಪಾಲಿಕಾರ್ಬೊನೇಟ್
(4) ಪಾಲಿಎಥಿಲೀನ್

www.jnanaloka.in

3. ಈ ಕೆಳಗಿನವುಗಳಲ್ಲಿ ಯಾವುದು ಭೂಮಿಯಲ್ಲಿ ಹೇರಳವಾಗಿ ಲಭ್ಯ ಇರುವ ಜೈವಿಕ ಪಾಲಿಮರ್ ?
(1) ಸೆಲ್ಯುಲೋಸ್
(2) ಲಿಗ್ನಿನ್
(3) ಸುಬೆರಿನ್
(4) ಚಿಟಿನ್

4. ಕೋಶ ಭಿತ್ತಿ ಇರದ ಜೀವಂತ ಸಸ್ಯವನ್ನು ಹೀಗೆಂದು ಕರೆಯುತ್ತಾರೆ.
(1) ಸೈಟೋಪ್ಲಾಸ್ಟ್
(2) ಸ್ಫೇರೋಪ್ಲಾಸ್ಟ್
(3) ಟೋನೋಪ್ಲಾಸ್ಟ್
(4) ಪ್ರೊಟೊಪ್ಲಾಸ್ಟ್

5. A ಮತ್ತು B ಗಳ ಸರಾಸರಿ ತಿಂಗಳ ಆದಾಯವು ರೂ. 5,050 ಆಗಿದೆ. B ಮತ್ತು C ಗಳ ಸರಾಸರಿ ತಿಂಗಳ ಆದಾಯವು ರೂ. 6,250 ಆಗಿದೆ ಮತ್ತು A ಮತ್ತು C ಗಳ ಸರಾಸರಿ ತಿಂಗಳ ಆದಾಯವು ರೂ. 5,200 ಆಗಿದ್ದಲ್ಲಿ. A ನ ತಿಂಗಳ ಆದಾಯ ಎಷ್ಟು ?
(1) 2,000
(2) 3,000
(3) 4,000
(4) 5,000

6. 1600 ಹಾಗೂ 1420 ಇವೆರಡನ್ನು ನಿಖರವಾಗಿ ಭಾಗಿಸುವ ಅತಿ ದೊಡ್ಡ ಸಂಖ್ಯೆ ಯಾವುದು ?
(1) 10
(2) 15
(3) 20
(4) 25

7. 4 ವರ್ಷಗಳ ಹಿಂದೆ ಒಂದು ಕುಟುಂಬದ 4 ಸದಸ್ಯರ ಸರಾಸರಿ ವಯಸ್ಸು 18 ವರ್ಷಗಳು ಆಗಿತ್ತು. ಒಂದು ನವಜಾತ ಶಿಶುವಿನ ಜನನದೊಂದಿಗೆ, ಇಂದಿಗೂ ಕೂಡ ಅವರ ಸರಾಸರಿ ವಯಸ್ಸು ಅಷ್ಟೇ ಆಗಿರುತ್ತದೆ. ಶಿಶುವಿನ ವಯಸ್ಸನ್ನು ಕಂಡು ಹಿಡಿಯಿರಿ.
(1) 2 ವರ್ಷಗಳು
(2) 3 ವರ್ಷಗಳು
(3) 4 ವರ್ಷಗಳು
(4) ಮೇಲಿನ ಯಾವುದೂ ಅಲ್ಲ.


knclingarajuedu.com

8. ಭಾರತದ ಸಾಗರದ ನೀರಿನಲ್ಲಿ ಹಾನಿಕಾರಕ ಶೈವಲ ಅರಳುವಿಕೆಯು ಹೆಚ್ಚಾಗುತ್ತಿರುವ ಬಗ್ಗೆ ಕಾಳಜಿಯಿದೆ. ಈ ವಿದ್ಯಮಾನಕ್ಕೆ ಕಾರಣವಾದ ಅಂಶಗಳು ಯಾವುದಾಗುತ್ತದೆ ?

(A) ಅಳಿವೆಗಳಿಂದ ಪೋಷಕಗಳ ವಿಸರ್ಜನೆ

(B) ಮಾನ್‌ಸೂನ್ ಅವಧಿಯಲ್ಲಿ ಭೂಮಿಯ ಕೊಚ್ಚುವಿಕೆ

(C) ಸಮುದ್ರದಲ್ಲಿ ಅಪ್‌ವೆಲ್ಲಿಂಗ್

ಕೆಳಗೆ ನೀಡಲಾದ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ.

(1) (A) ಮಾತ್ರ

(2) (A) ಮತ್ತು (B) ಮಾತ್ರ

(3) (A) ಮತ್ತು (C)

(4) ಮೇಲಿನ ಎಲ್ಲವೂ.

9. ಒಂದು ಟ್ರಕ್ 11.40 A.M. ಗೆ 'A' ನಗರದಿಂದ ಹೊರಟು, 240 ಮೈಲಿಗಳ ದೂರವಿರುವ 'B' ನಗರವನ್ನು ಅದೇ ದಿನ 4.28 P.M. ಗೆ ತಲುಪುತ್ತದೆ. ಈ ಪ್ರಯಾಣ (ಟ್ರಿಪ್)ದಲ್ಲಿ ಟ್ರಕ್‌ನ ಸರಾಸರಿ ವೇಗ ಎಷ್ಟು ?

(1) ಗಂಟೆಗೆ 48 ಮೈಲಿಗಳು

(2) ಗಂಟೆಗೆ 49 ಮೈಲಿಗಳು

(3) ಗಂಟೆಗೆ 40 ಮೈಲಿಗಳು

(4) ಗಂಟೆಗೆ 50 ಮೈಲಿಗಳು

10. ಈ ಕೆಳಕಂಡ ಹೇಳಿಕೆಗಳನ್ನು ಪರಿಗಣಿಸಿ.

(A) ಹಸಿರು ಕ್ರಾಂತಿಯ ಅವಧಿಯಲ್ಲಿ ಎಲ್ಲ ಆಹಾರ ಧಾನ್ಯಗಳು ಮತ್ತು ವಾಣಿಜ್ಯ ಬೆಳೆಗಳ ಉತ್ಪಾದನೆಯಲ್ಲಿ ಹೆಚ್ಚಳವಾಯಿತು.

(B) ಹಸಿರು ಕ್ರಾಂತಿಯು ಯಾವುದೇ ಪ್ರಾದೇಶಿಕ ತಾರತಮ್ಯವಿಲ್ಲ ಎಂಬುದನ್ನು ಖಚಿತಪಡಿಸಿತು.

ಈ ಮೇಲಿನ ಹೇಳಿಕೆಗಳಲ್ಲಿ ಯಾವುದು ಸರಿಯಾದುದು ?

ಈ ಕೆಳಗಿನ ಆಯ್ಕೆಗಳಿಂದ ಸರಿಯಾದ ಉತ್ತರವನ್ನಾರಿಸಿ.

(1) (A) ಮಾತ್ರ

(2) (B) ಮಾತ್ರ

(3) (A) ಮತ್ತು (B) ಎರಡೂ

(4) ಮೇಲಿನ ಯಾವುದೂ ಅಲ್ಲ.

11. $C_3$ ಸಸ್ಯಗಳು ಮತ್ತು $C_4$ ಸಸ್ಯಗಳನ್ನು ಪ್ರಮುಖವಾಗಿ ಪ್ರತ್ಯೇಕಿಸುವ ಒಂದು ಪ್ರಕ್ರಿಯೆಯು

(1) ದ್ಯುತಿ ಉಸಿರಾಟ

(2) ಸಾಗಣೆ

(3) ಗ್ಲೈಕೋಲಿಸಿಸ್

(4) ದ್ಯುತಿ ಸಂಶ್ಲೇಷಣೆ



Scanned by CamScanner

12. "SWAN" ಎಂಬ e-ಆಡಳಿತ ವೇದಿಕೆಯನ್ನು ಏರ್‌ಟೆಲ್ ಕಂಪನಿಯು ಯಾವ ರಾಜ್ಯಕ್ಕಾಗಿ ಅನಾವರಣಗೊಳಿಸಿದೆ ?

(1) ಗುಜರಾತ್
(2) ಮಧ್ಯ ಪ್ರದೇಶ
(3) ಉತ್ತರ ಪ್ರದೇಶ
(4) ಬಿಹಾರ

13. ರಷ್ಯಾ ಒಕ್ಕೂಟದ ಅತ್ಯುನ್ನತ ನಾಗರಿಕ ಗೌರವ ಪ್ರಶಸ್ತಿಯನ್ನು ಈ ಕೆಳಗಿನ ಯಾರಿಗೆ ಪ್ರದಾನ ಮಾಡಲಾಯಿತು ?

(1) ಡೊನಾಲ್ಡ್ ಟ್ರಂಪ್
(2) ನರೇಂದ್ರ ಮೋದಿ
(3) ಬಿಲ್ ಕ್ಲಿಂಟನ್
(4) ಬರಾಕ್ ಒಬಾಮಾ

14. 'ಒಂದು ಕುಟುಂಬ ಒಂದು ಉದ್ಯೋಗ' ಯೋಜನೆಯನ್ನು 2019 ರಲ್ಲಿ ಈ ಕೆಳಕಂಡ ಯಾವ ರಾಜ್ಯವು ಪ್ರಾರಂಭಿಸಿತು ?

(1) ಕರ್ನಾಟಕ
(2) ಸಿಕ್ಕಿಂ
(3) ಮಿಜೋರಾಂ
(4) ಅರುಣಾಚಲ ಪ್ರದೇಶ

15. ಕೆಳಗಿನ ಯಾವ ರಾಜ್ಯದಲ್ಲಿ ಭಾರತದ ಅತೀ ಉದ್ದನೆಯ ಏಕ ಪಥ ಉಕ್ಕಿನ ಕೇಬಲ್ ತೂಗು ಸೇತುವೆಯನ್ನು ಉದ್ಘಾಟಿಸಲಾಯಿತು ?

(1) ರಾಜಸ್ಥಾನ
(2) ಗುಜರಾತ್
(3) ಅರುಣಾಚಲ ಪ್ರದೇಶ
(4) ಪಶ್ಚಿಮ ಬಂಗಾಳ

16. ಈ ಕೆಳಕಂಡ ಯಾವ ಕ್ರೀಡೆಯು 2022 ರ ಕಾಮನ್‌ವೆಲ್ತ್ ಪಂದ್ಯಗಳಲ್ಲಿ (CWG) ಸೇರ್ಪಡೆಯಾಗಲಿದೆ ?

(1) ಮಹಿಳೆಯರ ಟಿ–20 (ಟ್ವೆಂಟಿ–ಟ್ವೆಂಟಿ) ಕ್ರಿಕೆಟ್
(2) ಬೀಚ್ (ಕಿನಾರೆ) ವಾಲಿಬಾಲ್
(3) ಪ್ಯಾರಾ (ಅರೆ) – ಟೇಬಲ್ ಟೆನ್ನಿಸ್
(4) ಮೇಲಿನ ಎಲ್ಲವೂ

17. ಭಾರತೀಯ ಪೆಟ್ರೋಲಿಯಂ ಸಂಸ್ಥೆಯು (IIP) ಪ್ಲಾಸ್ಟಿಕ್ ತ್ಯಾಜ್ಯವನ್ನು ಡೀಸೆಲ್ ಆಗಿ ಪರಿವರ್ತಿಸುವ ಸ್ಥಾವರವನ್ನು ಯಾವ ನಗರದಲ್ಲಿ ಉದ್ಘಾಟಿಸಿತು ?

(1) ಡೆಹ್ರಾಡೂನ್
(2) ಸೂರತ್
(3) ಜೈಪುರ
(4) ಶಿಮ್ಲಾ

18. PMRPY ಯನ್ನು ವಿಸ್ತರಿಸಿ ಬರೆಯಿರಿ.

(1) ಪ್ರಧಾನ ಮಂತ್ರಿ ರೂರಲ್ ಪ್ರೋತ್ಸಾಹನ್ ಯೋಜನೆ
(2) ಪ್ರಧಾನ ಮಂತ್ರಿ ರಕ್ಷಾ ಪ್ರೋತ್ಸಾಹನ್ ಯೋಜನೆ
(3) ಪ್ರಧಾನ ಮಂತ್ರಿ ರೋಜ್‌ಗಾರ್ ಪ್ರೋತ್ಸಾಹನ್ ಯೋಜನೆ
(4) ಪ್ರಧಾನ ಮಂತ್ರಿ ರಕ್ಷಿತ್ ಪ್ರೋತ್ಸಾಹನ್ ಯೋಜನೆ



Scanned by CamScanner

**19.** ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ 2019ರ ಆಶಯ-ವಿಷಯ ಯಾವುದಾಗಿತ್ತು ?

(1) ಸಮಾನ ಆಲೋಚನೆ, ಚತುರತೆ ನಿರ್ಮಾಣ, ಬದಲಾವಣೆಗಾಗಿ ಹೊಸತನವನ್ನು ತರುವುದು.

(2) 2030 ರ ವೇಳೆಗೆ ಪ್ಲ್ಯಾನೆಟ್ 50:50 : ಲಿಂಗ ಸಮಾನತೆಗಾಗಿ ಅದರ ಸ್ಥಾಪನೆ

(3) ಬದಲಾಗುತ್ತಿರುವ ಕಾರ್ಯ ಜಗತ್ತಿನಲ್ಲಿ ಮಹಿಳೆ

(4) ಸರ್ವತೋಮುಖ ಪ್ರಗತಿಯಲ್ಲಿ ಮಹಿಳಾ ಸಮಾನತೆ

**20.** ಪಿ.ವಿ. ಸಿಂಧೂ 2019 ರ ________ ನಲ್ಲಿ ಆಯೋಜಿಸಲಾಗಿದ್ದ ವಿಶ್ವ ಬ್ಯಾಡ್‌ಮಿಂಟನ್ ಚಾಂಪಿಯನ್‌ಷಿಪ್‌ನ್ನು ಗೆದ್ದರು.

(1) ಬೇಸೆಲ್

(2) ಟೋಕಿಯೋ

(3) ಸಿಂಗಾಪುರ್

(4) ಲಂಡನ್

**21.** ಈ ಕೆಳಕಂಡವರಲ್ಲಿ ಯಾರು ಕರಡು ರಾಷ್ಟ್ರೀಯ ಶಿಕ್ಷಣ ನೀತಿ – 2019 (ಭಾರತ) ರ ಸಮಿತಿಯ ಅಧ್ಯಕ್ಷರು ?

(1) ಪ್ರಕಾಶ್ ಜಾವಡೆಕರ್

(2) ಡಾ॥ ಕೆ. ಕಸ್ತೂರಿ ರಂಗನ್

(3) ಸ್ಮೃತಿ ಇರಾನಿ

(4) ರಮೇಶ್ ಪೊಕ್ರಿಯಾಲ್

**22.** ಒರಿಸ್ಸಾದ ಪ್ರಾಣಿಶಾಸ್ತ್ರೀಯ ಉದ್ಯಾನದಲ್ಲಿ ಮೃತಪಟ್ಟ ನರವಾನರ (Orangutan)ದ ಹೆಸರೇನು ?

(1) ಬನ್ನಿ

(2) ಎಡ್ಡೀ

(3) ಬಿನ್ನಿ

(4) ಬಂಟಿ

**23.** ಈ ಕೆಳಕಂಡ ಯಾವ ಸಾಂವಿಧಾನಿಕ ತಿದ್ದುಪಡಿಯು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸಿದೆ ?

(1) 122

(2) 124

(3) 132

(4) 134

**24.** ಮದರ್ ತೆರೆಸಾರವರು 1962 ರಲ್ಲಿ ಈ ಕೆಳಕಂಡ ಯಾವ ಕ್ಷೇತ್ರದಲ್ಲಿ ತಾವು ಸಲ್ಲಿಸಿದ ಸೇವೆಗೆ ಮ್ಯಾಗ್ಸೆಸೆ (Magsaysay) ಪ್ರಶಸ್ತಿಯನ್ನು ಪಡೆದರು ?

(1) ಸಮುದಾಯ ನಾಯಕತ್ವ

(2) ಸಾರ್ವಜನಿಕ ಸೇವೆ

(3) ಪತ್ರಿಕೋದ್ಯಮ ಮತ್ತು ಸಾಹಿತ್ಯ

(4) ಅಂತರರಾಷ್ಟ್ರೀಯ ತಿಳುವಳಿಕೆ

**25.** ಸ್ವಚ್ಛ ಭಾರತ ಅಭಿಯಾನದಲ್ಲಿ ಬಳಸಿದ 'ಓಡಿಎಫ್'ನ ವಿಸ್ತೃತ ರೂಪ ಇದಾಗಿದೆ ____

(1) ಔಟ್‌ಸೈಡ್ ಡಿಫೆಕೇಶನ್ ಫೆಸಿಲಿಟಿ

(2) ಔಟ್‌ಸೈಡ್ ಡಿಫೆಕೇಶನ್ ಫ್ರೀ

(3) ಓಪನ್ ಡಿಫೆಕೇಶನ್ ಫೆಸಿಲಿಟಿ

(4) ಓಪನ್ ಡಿಫೆಕೇಶನ್ ಫ್ರೀ

**26.** ಆಗಸ್ಟ್ 2019 ರಲ್ಲಿ ಎಷ್ಟು ಸಾರ್ವಜನಿಕ ವಲಯದ ಬ್ಯಾಂಕ್‌ಗಳನ್ನು ನಾಲ್ಕು ಬ್ಯಾಂಕ್‌ಗಳಲ್ಲಿ ವಿಲೀನಗೊಳಿಸಲಾಯಿತು ?

(1) ಹತ್ತು

(2) ಹನ್ನೆರಡು

(3) ಎಂಟು

(4) ಹನ್ನೊಂದು



Scanned by CamScanner

27. ಭಾರತದಲ್ಲಿ ಹೆಚ್ಚು ಸಿದ್ಧ ಉಡುಪು ಉತ್ಪಾದಿಸುವ ನಗರ ಯಾವುದು ?

(1) ಚೆನ್ನೈ •

(2) ಮೈಸೂರು

(3) ರಾಂಚಿ

(4) ಬೆಂಗಳೂರು

28. 2019ರ ರಾಮನ್ ಮ್ಯಾಗ್ಸೆಸೆ ಪ್ರಶಸ್ತಿ ಗೆದ್ದವರು ______

(1) ರವೀಶ್ ಕುಮಾರ್ •

(2) ಕೋಸ್ವೇ ಏನ್

(3) ಕಿಮ್ ಜಾಂಗ್–ಕೀ

(4) ಮೇಲಿನ ಎಲ್ಲವೂ

29. ಕೆಳಗಿನ ಯಾವ ಪರ್ವತ ಶ್ರೇಣಿಗಳು ಗಂಗಾ ನದಿಯ ಮೈದಾನ ಮತ್ತು ದಕ್ಷಿಣ ಪ್ರಸ್ಥಭೂಮಿಯನ್ನು ವಿಭಜಿಸುತ್ತದೆ ?

(1) ಅಜಂತ

(2) ಸಾತ್ಪುರ

(3) ವಿಂಧ್ಯ •

(4) ಅರಾವಳಿ

30. ಕೆಮ್ಮಣ್ಣುಗುಂಡಿಯಲ್ಲಿರುವ ಹೆಸರಾಂತ ಗಿರಿಧಾಮದ ಹೆಸರು ______

(1) ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಗಿರಿಧಾಮ

(2) ಇಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಗಿರಿಧಾಮ

(3) ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಗಿರಿಧಾಮ

(4) ಜಯಚಾಮರಾಜೇಂದ್ರ ಒಡೆಯರ್ ಗಿರಿಧಾಮ •

31. ಈಶಾನ್ಯ ಅಟ್ಲಾಂಟಿಕ್ ಸಾಗರವು ಜಗತ್ತಿನ ಅತ್ಯುತ್ತಮ ಮೀನು ಸಾಕಣೆ ತಾಣವೆಂದು ಪರಿಗಣಿಸಲ್ಪಡಲು ಕಾರಣ

(1) ಬೇಸಿಗೆ ಕಾಲದಲ್ಲಿ ಅಧಿಕ ಮಳೆ

(2) ಬಿಸಿಗಾಳಿ ಮತ್ತು ತಂಗಾಳಿ ಸಂಧಿಸುವುದು ಮತ್ತು ಹೆಚ್ಚು ಸಂಖ್ಯೆಯಲ್ಲಿ ಅಳಿವೆಗಳು ಇರುವುದು.

(3) ಚಂಡಮಾರುತವು ಆಗಾಗ್ಗೆ ಸಂಭವಿಸುವುದು ಮತ್ತು ಲವಣಾಂಶ ಮಿಶ್ರಿತ ಸ್ಥಿತಿ •

(4) ಚಳಿಗಾಲದಲ್ಲಿ ಅಧಿಕ ಹಿಮಪಾತವಾಗುವುದು.

32. ಕಾಶ್ಮೀರ ಕಣಿವೆಯು ಯಾವ ಎರಡು ಪರ್ವತ ಶ್ರೇಣಿಗಳ ನಡುವೆ ಇದೆ ?

(1) ದೌಲಾದರ್ ಶ್ರೇಣಿ ಮತ್ತು ಮುಸ್ಸೌರಿ ಶ್ರೇಣಿ

(2) ಮುಸ್ಸೌರಿ ಶ್ರೇಣಿ ಮತ್ತು ಜಾಸ್ಕರ್ ಶ್ರೇಣಿ

(3) ಜಾಸ್ಕರ್ ಮತ್ತು ಪೀರ್ ಪಂಜಲ್ ಶ್ರೇಣಿ

(4) ಪೀರ್ ಪಂಜಲ್ ಮತ್ತು ಕಾಂಗ್ರಾ ಶ್ರೇಣಿಗಳು •

33. ಮೇಲ್ಮೈ ವಿಸ್ತೀರ್ಣದಲ್ಲಿ ಅತಿ ದೊಡ್ಡದಾದ ಹಾಗೂ ಘನ ಅಳತೆಯಲ್ಲಿ ಮೂರನೆಯ ಅತಿದೊಡ್ಡದಾದ ವಿಶ್ವದ ಸಿಹಿನೀರಿನ ಸರೋವರ ಯಾವುದು ?

(1) ವಿಕ್ಟೋರಿಯಾ ಸರೋವರ

(2) ದಾಲ್ ಸರೋವರ

(3) ಸುಪೀರಿಯರ್ ಸರೋವರ •

(4) ಮಿಚಿಗನ್ ಸರೋವರ



knclingarajuedu.com
Scanned by CamScanner

34. ಭೀಮ್‌ಬೆಟ್ಕಾವು ಇದಕ್ಕೆ ಪ್ರಸಿದ್ಧವಾಗಿದೆ ?

(1) ಚಹಾ

(2) ಹತ್ತಿ

(3) ಕಬ್ಬಿಣ

(4) ಪ್ರಾಗೈತಿಹಾಸಿಕ ಶಿಲಾ ವರ್ಣಚಿತ್ರಗಳು

35. "ಝುಲು" ಜನಾಂಗೀಯ ಗುಂಪು ಕೆಳಗಿನ ಯಾವ ದೇಶಕ್ಕೆ ಸೇರಿದೆ ?

(1) ದಕ್ಷಿಣ ಅಮೇರಿಕಾ

(2) ದಕ್ಷಿಣ ಆಫ್ರಿಕಾ

(3) ದಕ್ಷಿಣ ಚೀನಾ

(4) ದಕ್ಷಿಣ ಭಾರತ

36. 'ಟೆಲಿಗ್ರಾಫ್' ಪ್ರಸ್ಥಭೂಮಿಯು ಇದರ ಮೇಲೆ ನೆಲೆಯಾಗಿದೆ.

(1) ದಕ್ಷಿಣ ಅಟ್ಲಾಂಟಿಕ್ ಏಣು / ಪರ್ವತ ಶ್ರೇಣಿ

(2) ಉತ್ತರ ಅಟ್ಲಾಂಟಿಕ್ ಏಣು / ಪರ್ವತ ಶ್ರೇಣಿ

(3) ಉತ್ತರ ಪೆಸಿಫಿಕ್ ಏಣು / ಪರ್ವತ ಶ್ರೇಣಿ

(4) ದಕ್ಷಿಣ ಪೆಸಿಫಿಕ್ ಏಣು / ಪರ್ವತ ಶ್ರೇಣಿ

37. ಭಾರತದಲ್ಲಿ ಆರ್ಥಿಕ ಉದಾರೀಕರಣವು 1991 ರಲ್ಲಿ ______ ಸಂಸ್ಥೆಗಳ ನಿಬಂಧನೆಗಳ ಭಾಗವಾಗಿ ಪ್ರಾರಂಭಿಸಲ್ಪಟ್ಟಿತ್ತು.

(1) ವಿಶ್ವ ವಾಣಿಜ್ಯ ಸಂಘಟನೆ ಮತ್ತು ವಿಶ್ವಸಂಸ್ಥೆ

(2) ವಿಶ್ವ ಬ್ಯಾಂಕು ಮತ್ತು ಅಂತರರಾಷ್ಟ್ರೀಯ ಹಣಕಾಸಿನ ನಿಧಿ

(3) ಯು.ಎಸ್.ಎ. ಮತ್ತು ಯುಕೆ

(4) ಯೂರೋಪಿಯನ್ ಯೂನಿಯನ್ ಮತ್ತು ಏಸಿಯಾನ್ (ASEAN)

38. ರವೀಂದ್ರನಾಥ ಠಾಗೋರರ ಸಲಹೆಯ ಮೇರೆಗೆ, ಬಂಗಾಳದ ವಿಭಜನೆಯ ದಿನಾಂಕವಾದ 16ನೇ ಅಕ್ಟೋಬರ್ 1905 ಅನ್ನು ______ ದಿನವನ್ನಾಗಿ ಆಚರಿಸಲಾಯಿತು.

(1) ಐಕಮತ್ಯದ ದಿನ

(2) ಸಹೋದರತ್ವದ ದಿನ

(3) ಕಪ್ಪು ದಿನ

(4) ರಾಖೀ ಬಂಧನದ ದಿನ

39. ಭಾರತೀಯ ಸ್ವಾತಂತ್ರ್ಯ ವಿಧೇಯಕವನ್ನು ಬ್ರಿಟಿಷ್ ಸಂಸತ್ತಿನ ಮುಂದೆ ಕೆಳಗಿನ ಯಾವ ಯೋಜನೆಯ ಮೇರೆಗೆ ಮಂಡಿಸಲಾಯಿತು ?

(1) ಜೂನ್ ಯೋಜನೆ

(2) ಜುಲೈ ಯೋಜನೆ

(3) ಆಗಸ್ಟ್ ಯೋಜನೆ

(4) ಮೇ ಯೋಜನೆ

40. 1942 ರಲ್ಲಿ ಕರ್ನಾಟಕದ ರಾಯಚೂರು ಜಿಲ್ಲೆಯ ಲಿಂಗಸಗೂರಿನಲ್ಲಿ ಪತ್ತೆಯಾದ ಪ್ರಾಕ್ಚಾರಿತ್ರಿಕ ಶಿಲಾಯುಗದ ಕೈಗೊಡಲಿಯನ್ನು ಕಂಡು ಹಿಡಿದವರು ಯಾರು ?

(1) ಪ್ರಿಮ್ ರೋಸ್

(2) ಬ್ರೂಸ್ ಫುಟ್

(3) ಡಾ. ವೀಲ್ಹರ್

(4) ಡಾ. ಎಂ.ಎಚ್. ಕೃಷ್ಣ



Scanned by CamScanner

41. ಸಿಂಧೂ ಕಣಿವೆ ನಾಗರಿಕತೆಯ ಜನರಿಗೆ ಇದರ ಬಗ್ಗೆ ಅರಿವಿರಲಿಲ್ಲ

(1) ತಾಮ್ರ

(2) ಚಿನ್ನ

(3) ಕಬ್ಬಿಣ

(4) ಬೆಳ್ಳಿ

42. ಒಂದನೆಯ ವಿಕ್ರಮಾದಿತ್ಯನ ಹೊನ್ನೂರು, ಸವಣೂರು ಮತ್ತು ಗದ್ವಾಲ ತಾಮ್ರ ಫಲಕಗಳ ಕರ್ತೃ ಜಯಸೇನನು ಈ ಕೆಳಗಿನ ಯಾವ ಹುದ್ದೆಯನ್ನಲಂಕರಿಸಿದ್ದನು ?

(1) ಕುಮಾರಾಮಾತ್ಯ

(2) ಮಹಾಸಂಧಿವಿಗ್ರಹಿಕ

(3) ಅಕ್ಷಪಟಲಾಧಿಕಾರಿ

(4) ಮಹಾದಂಡನಾಯಕ

43. ವರ್ನಾಕುಲರ್ ಮುದ್ರಣಾಲಯ ಕಾಯ್ದೆಯು ಜಾರಿಗೆ ಬಂದ ವರ್ಷ

(1) 1899

(2) 1920

(3) 1865

(4) 1878

44. ಕ್ವಿಟ್ ಇಂಡಿಯಾ ಚಳುವಳಿ ಪ್ರಾರಂಭವಾಗಲು ತತ್‌ಕ್ಷಣದ ಕಾರಣ ಏನು ?

(1) ಮಹಾತ್ಮಾಗಾಂಧಿಯವರನ್ನು ಬಂಧಿಸಿದ್ದು

(2) ಆಗ್ನೇಯ ಏಷ್ಯಾದಿಂದ ಬ್ರಿಟಿಷರು ಹಿಂತೆಗೆದುಕೊಂಡಿದ್ದು

(3) ಕ್ರಿಪ್ಸ್ ನಿಯೋಗದ ವೈಫಲ್ಯ

(4) ಅಧೀನ ಒಕ್ಕೂಟದ ನೀತಿ

45. ಬಡ್ಡಿಯ ಲಿಕ್ವಿಡಿಟಿ ಆದ್ಯತೆ ಸಿದ್ಧಾಂತವನ್ನು ಹೀಗೆಂತಲೂ ಕರೆಯುತ್ತಾರೆ.

(1) ಬಡ್ಡಿಯ ಹಣಕಾಸಿನ/ವಿತ್ತ ಸಿದ್ಧಾಂತ

(2) ಬಡ್ಡಿಯ ವಾಸ್ತವಿಕ ಸಿದ್ಧಾಂತ

(3) ಬಡ್ಡಿಯ ಶಾಸ್ತ್ರೀಯ ಸಿದ್ಧಾಂತ

(4) ಮೇಲಿನ ಎಲ್ಲವೂ

46. ವ್ಯುತ್ಪತ್ತಿ ಶಾಸ್ತ್ರದ ಪ್ರಾಚೀನ ಭಾರತೀಯ ವಿಜ್ಞಾನವು ______

(1) ನಿರುಕ್ತ

(2) ಉಪಪತ್ತಿ

(3) ವ್ಯಾಕರಣ

(4) ನಿಷ್ಪತ್ತಿ

47. 1904 ರಲ್ಲಿ, ವಿ.ಡಿ. ಸಾವರ್ಕರ್‌ರವರು ಸಂಘಟಿಸಿದ್ದ ಒಂದು ರಹಸ್ಯ ಸಂಘವನ್ನು ಹೀಗೆಂದು ಕರೆಯಲಾಯಿತು

(1) ಪ್ರಬುದ್ಧ ಭಾರತ

(2) ಜಾಗೋ ಭಾರತ್

(3) ಅಭಿನವ ಭಾರತ್

(4) ಅಮಿಶೀಲನ್ ಭಾರತ್

48. ಕಾವೇರಿ ನದಿ ದಂಡೆಯ ಮೇಲೆ ತಂಜಾವೂರಿನ ಮಹತ್ತಾದ ಬೃಹದೇಶ್ವರ ದೇವಾಲಯವನ್ನು ನಿರ್ಮಿಸಿದವರು ಯಾರು ?

(1) ರಾಜ ರಾಜ ಚೋಳ

(2) ಕರಿ ಕಾಲ ಚೋಳ

(3) ಉತ್ತಮ ಚೋಳ

(4) ರಘೋತ್ತಮ ಚೋಳ



Scanned by CamScanner

49. ಹನ್ನೆರಡನೇ ಪಂಚವಾರ್ಷಿಕ ಯೋಜನೆಯು ಇದರ ಮೇಲೆ ಒತ್ತು ನೀಡಿತು.

(1) ಸಾರ್ವಜನಿಕ ವಲಯ

(2) ಖಾಸಗಿ ವಲಯ

(3) ಪಿಪಿಪಿ ಮಾದರಿ

(4) ಕೇಂದ್ರ ಏಕಸ್ವಾಮ್ಯ

50. ತಲಾ ಆದಾಯವನ್ನು ಲೆಕ್ಕಹಾಕಲು ಕೆಳಗಿನವುಗಳಲ್ಲಿ ಸೂಕ್ತವಾದುದನ್ನು ಆರಿಸಿ.

(1) ತಲಾ ಆದಾಯ = ರಾಷ್ಟ್ರೀಯ ಆದಾಯವನ್ನು ರಾಷ್ಟ್ರದ ಒಟ್ಟು ಜನಸಂಖ್ಯೆಯಿಂದ ಭಾಗಿಸುವುದು.

(2) ತಲಾ ಆದಾಯ = ರಾಷ್ಟ್ರೀಯ ಆದಾಯವನ್ನು ರಾಷ್ಟ್ರದ ಒಟ್ಟು ಜನಸಂಖ್ಯೆಯಿಂದ ಗುಣಿಸುವುದು.

(3) ತಲಾ ಆದಾಯ = ರಾಷ್ಟ್ರೀಯ ಆದಾಯದಲ್ಲಿ ರಾಷ್ಟ್ರದ ಒಟ್ಟು ಜನಸಂಖ್ಯೆಯನ್ನು ಕಳೆಯುವುದು.

(4) ತಲಾ ಆದಾಯ = ರಾಷ್ಟ್ರೀಯ ಆದಾಯವನ್ನು ರಾಷ್ಟ್ರದ ಒಟ್ಟು ಜನಸಂಖ್ಯೆಗೆ ಸೇರಿಸುವುದು.

51. ಭಾರತದಲ್ಲಿ ರಾಷ್ಟ್ರೀಯ ಆದಾಯದ ಅಂದಾಜುಗಳನ್ನು ಈ ಕೆಳಗಿನ ಯಾವ ಸಂಸ್ಥೆಯು ಸಿದ್ಧಪಡಿಸುತ್ತದೆ ?

(1) ಯೋಜನಾ ಆಯೋಗ

(2) ಹಣಕಾಸಿನ ಮಂತ್ರಾಲಯ

(3) ಭಾರತೀಯ ರಿಸರ್ವ್ ಬ್ಯಾಂಕ್

(4) ಕೇಂದ್ರ ಸಾಂಖ್ಯಿಕ ಸಂಸ್ಥೆ

52. ಇತ್ತೀಚೆಗೆ ಪ್ರಕಟಿತವಾದ ಕೇಂದ್ರ ಸರ್ಕಾರದ ಪರಂಪರಾಗತ ಕೃಷಿ ವಿಕಾಸ್ ಯೋಜನೆಯ ಉದ್ದೇಶವು ಇದನ್ನು ವರ್ಧಿಸುವುದಾಗಿದೆ.

(1) ಜೈವಿಕ (ಸಾವಯವ) ಕೃಷಿ

(2) ಹನಿ ನೀರಾವರಿ

(3) ತೋಟಗಾರಿಕೆ ಬೆಳೆ

(4) ಸಸ್ಯ (ತರಕಾರಿ) ಉತ್ಪನ್ನ

53. 'ಐ ಡು ವಾಟ್ ಐ ಡು' ಪುಸ್ತಕವನ್ನು ಬರೆದವರು

(1) ರಘುರಾಮ್ ಜಿ. ರಾಜನ್

(2) ಸಿ. ರಂಗರಾಜನ್

(3) ಸುಬ್ಬರಾವ್

(4) ಅಮರ್ತ್ಯ ಸೇನ್

54. ಹಣದುಬ್ಬರದ ಅವಧಿಯಲ್ಲಿ ರೂಪಾಯಿಯ ಮೌಲ್ಯವು

(1) ಹೆಚ್ಚಾಗುತ್ತದೆ.

(2) ಕಡಿಮೆಯಾಗುತ್ತದೆ.

(3) ಸಮನಾಗುತ್ತದೆ.

(4) ಏರಿಳಿತವಾಗುತ್ತದೆ.

55. ಒಳಗೊಂಡ ಅಭಿವೃದ್ಧಿಯನ್ನು ಇಲ್ಲಿ ವಿವರಿಸಲಾಗಿದೆ.

(1) IX ನೇ ಪಂಚವಾರ್ಷಿಕ ಯೋಜನೆ

(2) X ನೇ ಪಂಚವಾರ್ಷಿಕ ಯೋಜನೆ

(3) XI ನೇ ಪಂಚವಾರ್ಷಿಕ ಯೋಜನೆ

(4) XII ನೇ ಪಂಚವಾರ್ಷಿಕ ಯೋಜನೆ



Scanned by CamScanner

56. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (MGNREGA)ಯು ಕರ್ನಾಟಕದಲ್ಲಿ ಜಾರಿಗೆ ಬಂದ ದಿನಾಂಕ ಯಾವುದು ?

(1) 7–09–2005

(2) 1–04–2006

(3) 7–08–2007

(4) 25–04–2008

57. ಭಾರತೀಯ ಅರ್ಥವ್ಯವಸ್ಥೆಯ ಮೂಲಾಧಾರವೆಂದರೆ.

(1) ಸಾರ್ವಜನಿಕ ವಲಯ ಹಾಗೂ ಖಾಸಗಿ ವಲಯಗಳ ಸಹ ಅಸ್ತಿತ್ವ

(2) ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯಗಳ ಸಮ ಅಸ್ತಿತ್ವ

(3) ಕೇಂದ್ರ ಮತ್ತು ರಾಜ್ಯ ಮಾಲಿಕತ್ವದ ಸಂಪನ್ಮೂಲಗಳ ನಡುವೆ ಸಮತೋಲನ

(4) ಮೇಲಿನ ಯಾವುದೂ ಅಲ್ಲ.

58. ಕೆಲವು ಸರಕುಗಳಲ್ಲಿ ವಾಸ್ತವ ಬೆಲೆ (ಗೊತ್ತುಪಡಿಸುವ) ಉದ್ದೇಶವು ಯಾವುದಾಗಿದೆ ?

(1) ಉತ್ಪಾದಕರ ನಿಯಂತ್ರಣ

(2) ಗ್ರಾಹಕರ ನಿಯಂತ್ರಣ

(3) ಅತ್ಯಧಿಕ ಲಾಭ ಮಾಡುವುದು

(4) ಅವಶ್ಯಕತೆಯುಳ್ಳ ಜನರಿಗೆ ಸರಕು ಪೂರೈಕೆ

59. ಕರ್ನಾಟಕದ ಯಾವ ಸ್ಥಳದಲ್ಲಿ ಪ್ರಥಮ ಕೃಷಿ ಪತ್ತಿನ ಸಹಕಾರ ಸಂಘ ರಚನೆಯಾಯಿತು ?

(1) ಬೆಂಗಳೂರು

(2) ಕಣಗಿನಹಾಳ

(3) ಧಾರವಾಡ

(4) ದಕ್ಷಿಣ ಕನ್ನಡ

60. ಭಾರತೀಯ ಸಂವಿಧಾನದ ಯಾವ ವಿಧಿಯು ಭಾರತದ ಸರ್ವೋಚ್ಛ ನ್ಯಾಯಾಲಯದ ರಚನೆಯ ಬಗ್ಗೆ ವ್ಯವಹರಿಸುವುದು ?

(1) 124

(2) 127

(3) 132

(4) 133

61. 'ಉಡಾನ್' (UDAN) ಇದನ್ನು ವಿಸ್ತರಿಸಿ.

(1) ಉಡೇ ದೇಶ್ ಕಾ ಆಮ್ ನಾಗರಿಕ್

(2) ಅಂಡರ್ ಡೆವಲಪ್‌ಮೆಂಟ್ ಏಷ್ಯನ್ ನೇಶನ್ಸ್

(3) ಉರ್ದು ಡೆವಲಪ್‌ಮೆಂಟ್ ಅಕಾಡೆಮಿ ಇನ್ ನಾರ್ತ್

(4) ಮೇಲಿನ ಯಾವುದೂ ಅಲ್ಲ.

62. ಡಿಸೆಂಬರ್ 23, 2014 ರಂದು ಕರ್ನಾಟಕ ಸರ್ಕಾರವು ನೇಮಿಸಿದ 4 ನೇ ಹಣಕಾಸಿನ ಆಯೋಗದ ಅಧ್ಯಕ್ಷರು ಯಾರು ?

(1) ಸಿ. ಚಿನ್ನಸ್ವಾಮಿ

(2) ಡಿ. ಶಂಕರ್‌ಮೂರ್ತಿ

(3) ಬಿ.ಎಸ್. ಯಡಿಯೂರಪ್ಪ

(4) ಸಿ.ಟಿ. ರವಿ

63. ಭಾರತದ ಲೋಕಸಭೆಯ ಪ್ರಥಮ ಮಹಿಳಾ ಸಭಾಪತಿ ಯಾರು ?

(1) ಸರೋಜಿನಿ ನಾಯ್ಡು

(2) ಮೀರಾ ಕುಮಾರ್

(3) ಸುಮಿತ್ರಾ ಮಹಾಜನ್

(4) ಸುಷ್ಮಾ ಸ್ವರಾಜ್



Scanned by CamScanner

64. ಭಾರತೀಯ ಸಂವಿಧಾನದ ಈ ಕೆಳಕಂಡ ಯಾವ ಅನುಚ್ಛೇದದಡಿ ಭಾರತದಲ್ಲಿ ಆರ್ಥಿಕ ತುರ್ತು ಪರಿಸ್ಥಿತಿಯನ್ನು ಘೋಷಿಸ-ಬಹುದಾಗಿದೆ ?

(1) ಅನುಚ್ಛೇದ 360

(2) ಅನುಚ್ಛೇದ 352

(3) ಅನುಚ್ಛೇದ 356

(4) ಅನುಚ್ಛೇದ 370

65. ಭಾರತದ ಸಂವಿಧಾನದ ಯಾವ ವಿಧಿಯು ಒಕ್ಕೂಟ ಸರ್ಕಾರದ ಅಧಿಕೃತ ಭಾಷೆಯ ಬಗ್ಗೆ ವ್ಯವಹರಿಸುತ್ತದೆ ?

(1) 332

(2) 336

(3) 341

(4) 343

66. "ನ್ಯಾಯಂಗೀಯ ಪುನರ್ ಪರಿಶೀಲನೆ"ಯು ________ ನ ವಿಶೇಷ ಅಧಿಕಾರವಾಗಿದೆ.

(1) ಶಾಸಕಾಂಗ

(2) ಕಾರ್ಯಾಂಗ

(3) ನ್ಯಾಯಾಂಗ

(4) ಸಂಸತ್ತು

67. ಅಶೋಕ್ ಮೆಹ್ತಾ ಸಮಿತಿಯು ಈ ಕೆಳಕಂಡ ಯಾವುದಕ್ಕೆ ಸಂಬಂಧಿಸಿದ್ದು ?

(1) ಕೇಂದ್ರ ಸರ್ಕಾರ

(2) ರಾಜ್ಯ ಸರ್ಕಾರ

(3) ಲೋಕಾಯುಕ್ತ

(4) ಸ್ಥಳೀಯ ಸ್ವಯಂ ಸರ್ಕಾರ

68. ಭಾರತ ಸಂವಿಧಾನದ ಭಾಗ-II ಈ ಕೆಳಗಿನ ಯಾವುದರ ಬಗ್ಗೆ ವ್ಯವಹರಿಸುತ್ತದೆ ?

(1) ಒಕ್ಕೂಟ ವ್ಯವಸ್ಥೆ

(2) ಕಾನೂನಿನ ನಿಯಮ (Rule of Law)

(3) ಸ್ಥಳೀಯ ಸ್ವಯಂ ಸರ್ಕಾರ

(4) ಪೌರತ್ವ

69. ಭಾರತೀಯ ಸಂವಿಧಾನದ ಅನುಸೂಚಿಯು ________

(1) ಮುಖ್ಯ ದಾಖಲೆಗೆ ಲಗತ್ತಿಸಲಾದ ಒಂದು ಪಟ್ಟಿ, ಕೋಷ್ಟಕ ಅಥವಾ ಅಗತ್ಯದ ವಿವರಗಳು.

(2) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿ ಮತ್ತು ಪ್ರವರ್ಗಗಳು.

(3) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಅಧಿಕಾರಗಳ ಹಂಚಿಕೆ.

(4) ಪ್ರತಿನಿಧಿಗಳು ಮತ್ತು ಸರ್ಕಾರಿ ಅಧಿಕಾರಿಗಳಿಗೆ ಸಂಬಂಧಿಸಿದ ಕಾರ್ಯಗಳು ಮತ್ತು ಹೊಣೆಗಾರಿಕೆಗಳ ವೇಳಾ ಪಟ್ಟಿ.

70. ಆರ್.ಬಿ.ಐ. ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (NABARD) ಗೆ ಈ ಕೆಳಗಿನ ಯಾವ ಸಂಸ್ಥೆಗಳ ತಪಾಸಣೆ ನಡೆಸಲು ಅಧಿಕಾರವನ್ನು ಕೊಟ್ಟಿದೆ ?

(1) PACS ಮತ್ತು CCB ಗಳು

(2) PACS ಮತ್ತು StCB ಗಳು

(3) CCB ಗಳು ಮತ್ತು StCB ಗಳು

(4) ಮೇಲಿನ ಯಾವುದೂ ಅಲ್ಲ.



Scanned by CamScanner

71. "ಅಧಿಕಾರಶಾಹಿ" ಪದವನ್ನು ಮೊದಲು ಟಂಕಿಸಿದವರು ಯಾರು ?
(1) ಲೂಯಿಸ್ ಬ್ರಾನ್‌ಡಿಸ್
(2) ಎಫ್.ಡಬ್ಲ್ಯೂ. ಟೇಲರ್
(3) ರಿಗ್ಸ್
(4) ವಿನ್‌ಸೆಂಟ್ ಡಿ ಗೌರ್ನೈ

72. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ "ಎಲ್ಲಾ ಸಂಸದೀಯ ಪ್ರಜಾಪ್ರಭುತ್ವಗಳಲ್ಲಿ ನಾಗರಿಕ ಸೇವಾ ವರ್ಗವು ಅತ್ಯಂತ ಶಕ್ತಿಶಾಲಿಯಾಗಿರುವುದು ಏಕೆಂದರೆ
(A) ಸಾಮಾಜಿಕ ಹೊಣೆಗಾರಿಕೆಯ ತತ್ತ್ವಗಳು
(B) ಮಂತ್ರಿ ಪರಿಷತ್ತಿನ ಹೊಣೆಗಾರಿಕೆಯ ತತ್ತ್ವ
(C) ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ (ಶಾಸನಾಧಿಕಾರದ) ಆಚರಣೆ ತತ್ತ್ವ
ಈ ಮೇಲಿನ ಹೇಳಿಕೆಗಳಲ್ಲಿ ಯಾವುದು/ವು ಸರಿ ?
ಕೆಳಗೆ ನೀಡಿರುವ ಆಯ್ಕೆಗಳಿಂದ ಸರಿಯಾದ ಉತ್ತರವನ್ನು ಆರಿಸಿರಿ.
(1) (A) ಮತ್ತು (B)
(2) (B) ಮತ್ತು (C)
(3) (A), (B) ಮತ್ತು (C)
(4) (A) ಮತ್ತು (C)

73. 'ಸಾರ್ವಜನಿಕ ಆಡಳಿತವು ಒಂದು ವಿಜ್ಞಾನ'- ಎನ್ನುವ ಪ್ರತಿಪಾದನೆಯನ್ನು ಆಕ್ಷೇಪಿಸಿದವರು.
(1) ರಾಬರ್ಟ್ ದಾಲ್
(2) ಲೂಥರ್ ಗಲ್ಲಿಕ್
(3) ಲಿಂಡಾಲ್ ಉರ್ವಿಕ್
(4) ರೇಲಿ

74. ಉತ್ತರ ಗೋಳಾರ್ಧದಲ್ಲಿ ಚಂಡಮಾರುತದ ಅವಧಿಯಲ್ಲಿ ಗಾಳಿಯು ಬೀಸುವ ದಿಕ್ಕು
(1) ಗಡಿಯಾರದ ವಿರುದ್ಧ ದಿಕ್ಕು (ಅಪ್ರದಕ್ಷಿಣಾಕಾರ)
(2) ಗಡಿಯಾರ ತಿರುಗುವ ದಿಕ್ಕು (ಪ್ರದಕ್ಷಿಣಾಕಾರ)
(3) ಭೂಕೇಂದ್ರದೆಡೆಗೆ ನೇರವಾಗಿ
(4) ಧ್ರುವಗಳ ಕಡೆಗೆ

75. 'ಸಾಂಸ್ಕೃತಿಕ ಹಿಂದುಳಿಯುವಿಕೆ' ಪರಿಕಲ್ಪನೆಯನ್ನು ಪರಿಚಯಿಸಿದವರು ಯಾರು ?
(1) ಎಲ್.ಹೆಚ್. ಮಾರ್ಗನ್
(2) ಎಂ.ಎಸ್. ಥಾಮಸ್
(3) ಅಗಸ್ಟ್ ಕಾಮ್ಟೆ
(4) ವಿಲಿಯಂ ಆಗ್‌ಬರ್ನ್

76. 'ಲಡಂಗ್' ಎನ್ನುವುದು
(1) ಇಂಡೋನೇಷಿಯಾದ ಸ್ಥಳಾಂತರ ಬೇಸಾಯ
(2) ಇಂಡೋನೇಷಿಯಾದ ಕಾಫಿ ತೋಟಗಳು
(3) ಪಶ್ಚಿಮ ಯುರೋಪಿನ ಮಿಶ್ರ ಬೇಸಾಯ
(4) ಈಶಾನ್ಯ ಭಾರತದ ಭತ್ತ ಪ್ರಭೇದ

77. ಮಸ್ಕೋವೈಟ್, ಫ್ಲೋಗೋಪೈಟ್ ಮತ್ತು ಬಯೋಟೈಟ್‌ಗಳು
(1) ಕಬ್ಬಿಣದ ಅದುರುಗಳು
(2) ಅಭ್ರಕದ ಅದುರುಗಳು
(3) ಅಲ್ಯೂಮಿನಿಯಂನ ಅದುರುಗಳು
(4) ಮ್ಯಾಂಗನೀಸ್‌ನ ಅದುರುಗಳು

78. ಸಮತಾಪಿ ರೇಖೆ ಎಂಬ ಪದವು ಇದಕ್ಕೆ ಸಂಬಂಧಿಸಿದೆ.

(1) ತಾಪಮಾನ

(2) ಒತ್ತಡ

(3) ಮಾರುತ

(4) ಎತ್ತರ (ಉನ್ನತಿ)

79. ಸಿಂಧೂ ನದಿಯ ಉಗಮ ಸ್ಥಳವು

(1) ಕಾಶ್ಮೀರ

(2) ಮಾನಸ ಸರೋವರ

(3) ಕೈಲಾಸ

(4) ಗಂಗೋತ್ರಿ

80. ಭಾರತದಲ್ಲಿ ಅತ್ಯಧಿಕ ಕಬ್ಬಿಣದ ಅದುರನ್ನು ಉತ್ಪಾದಿಸುವ ರಾಜ್ಯ

(1) ಜಾರ್ಖಂಡ್

(2) ಆಂಧ್ರ ಪ್ರದೇಶ

(3) ಛತ್ತೀಸ್‌ಗಢ್

(4) ಒರಿಸ್ಸಾ

81. ಈ ಕೆಳಗಿನವುಗಳಲ್ಲಿ ಯಾವುದು ಕಬ್ಬಿಣದ ಅದುರು ಅಲ್ಲ ?

(1) ಹೆಮಟೈಟ್

(2) ಲಿಮೊನೈಟ್

(3) ಲಿಗ್ನೈಟ್

(4) ಮ್ಯಾಗ್ನಟೈಟ್

82. ಭಾರತ ಸರ್ಕಾರ ಬೆಳೆ ವಿಮೆಯನ್ನು ಜಾರಿಗೊಳಿಸಿದ ವರ್ಷ

(1) 1976

(2) 1985

(3) 1998

(4) ಮೇಲಿನ ಯಾವುದೂ ಅಲ್ಲ.

83. ಈ ಕೆಳಗಿನ ಯಾವ ರಾಜ್ಯವು "ಮುಗಾಸ್ ರೇಷ್ಮೆ" ಯನ್ನು ಉತ್ಪಾದಿಸುತ್ತದೆ ?

(1) ಅಸ್ಸಾಂ

(2) ಜಾರ್ಖಂಡ್

(3) ಜಮ್ಮು ಮತ್ತು ಕಾಶ್ಮೀರ

(4) ಪಶ್ಚಿಮ ಬಂಗಾಳ

84. ಪ್ರಪಂಚದ ಅತ್ಯಂತ ದೊಡ್ಡ ನದಿದ್ವೀಪ ಯಾವುದು ?

(1) ಮಾಜುಲಿ ದ್ವೀಪ

(2) ಶ್ರೀರಂಗಮ್ ದ್ವೀಪ

(3) ಮರಜೋ ದ್ವೀಪ

(4) ಬರ್ನಾಲ್ ದ್ವೀಪ

85. ಈ ಕೆಳಗಿನವುಗಳಲ್ಲಿ ಯಾವುದು ಪಶ್ಚಿಮ ಬಂಗಾಳದ ಜನಪ್ರಿಯ ತೋಟದ ಬೆಳೆಯಾಗಿದೆ ?

(1) ಕೋಕೋ

(2) ತೆಂಗು

(3) ಕಾಫಿ

(4) ಚಹಾ



Scanned by CamScanner

86. ಒಂದು ಮಸೂರದ ಸಾಮರ್ಥ್ಯ (ಪವರ್) ಕುರಿತಂತೆ ಎಸ್.ಐ. ಏಕಮಾನವು

(1) ಕ್ಯಾಂಡೆಲಾ

(2) ಡಯೋಪ್ಟರ್

(3) ಮೀಟರ್

(4) ವ್ಯಾಟ್

87. ಆಹಾರ ಸರಪಳಿಯಲ್ಲಿ ಒಂದು ಪೌಷ್ಟಿಕದ ಮಟ್ಟದಿಂದ ಇನ್ನೊಂದು ಪೌಷ್ಟಿಕದ ಮಟ್ಟಕ್ಕೆ ವರ್ಗಾವಣೆಯಾದ ಶೇಕಡಾವಾರು ಶಕ್ತಿಯನ್ನು ಹೀಗೆಂದು ಕರೆಯಲಾಗುತ್ತದೆ.

(1) ಪರಿಸರಾತ್ಮಕ ದಕ್ಷತೆ

(2) ನಿವ್ವಳ ಪ್ರಾಥಮಿಕ ಉತ್ಪಾದಕತೆ

(3) ವಿಕಿರಣ ಶಕ್ತಿ

(4) ದ್ಯುತಿ ಸಂಶ್ಲೇಷಣೆ

88. ಮೈರಿಸ್ಟಿಕಾ ಜೌಗು ಪ್ರದೇಶಗಳು ನೆಲೆಗೊಂಡಿರುವ ಸ್ಥಳ

(1) ಥಾರ್ ಮರುಭೂಮಿ

(2) ಹಿಮಾಲಯ ಪ್ರದೇಶ

(3) ಪಶ್ಚಿಮ ಘಟ್ಟಗಳು

(4) ಡೆಕ್ಕನ್ ಪ್ರಸ್ಥಭೂಮಿ

89. ಬೆಳಕಿನ ವೇಗವು ಕೆಳಗಿನ ಯಾವುದರ ಮೇಲೆ ಅವಲಂಬಿತವಾಗಿರುತ್ತದೆ ?

(1) ಮಾಧ್ಯಮದ ವಿದ್ಯುದೀಯ ಗುಣ ಲಕ್ಷಣಗಳು

(2) ಮಾಧ್ಯಮದ ಕಾಂತೀಯ ಗುಣ ಲಕ್ಷಣಗಳು

(3) (1) ಮತ್ತು (2) ಎರಡೂ

(4) (1) ಆಗಲೀ ಇಲ್ಲವೇ (2) ಆಗಲೀ ಅಲ್ಲ

90. ಒಂದು ಕೃಷ್ಣ ಕಾಯವು (ಕಪ್ಪು ದೇಹ) ಕೆಳಗಿನ ಯಾವುದನ್ನು ಕೈಗೊಳ್ಳುವುದಿಲ್ಲ ?

(1) ವಿಕಿರಣ ಉತ್ಸರ್ಜನೆ

(2) ವಿಕಿರಣ ಹೀರಿಕೆ

(3) ವಿಕಿರಣ ಪ್ರತಿಫಲನ

(4) ವಿಕಿರಣ ವಕ್ರೀಭವನ

91. ವಸ್ತುವು ಘನಸ್ಥಿತಿಯಿಂದ ಆವಿಸ್ಥಿತಿಗೆ ನೇರವಾಗಿ ಪರಿವರ್ತನೆ ಆಗುವ ಪ್ರಕ್ರಿಯೆ

(1) ಸಾಂದ್ರನ

(2) ಉತ್ಪತನ

(3) ಆವೀಕರಣ

(4) ದ್ರವೀಕರಣ

92. ಉಷ್ಣವಿದ್ಯುತ್ ಶೀತಕಯಂತ್ರದ (ರೆಫ್ರಿಜರೇಟರ್) ಕಾರ್ಯವು ಈ ಕೆಳಗಿನ ಯಾವ ತತ್ತ್ವವನ್ನಾಧರಿಸಿದೆ ?

(1) ಜೌಲ್ ಪರಿಣಾಮ

(2) ಸೀಬೆಕ್ ಪರಿಣಾಮ

(3) ಪೆಲ್ಟಿಯೆರ್ ಪರಿಣಾಮ

(4) ಮೇಲಿನ ಯಾವುದೂ ಅಲ್ಲ.

93. ಸೆಲ್ ಫೋನ್‌ಗಳಲ್ಲಿ ಸಂಜ್ಞೆಗಳು ಕೆಳಗಿನ ಯಾವುದರ ಮೂಲಕ ಪ್ರಸರಣವಾಗುವುದು ?

(1) ಅವಕೆಂಪು ತರಂಗಗಳು

(2) ರೇಡಿಯೋ ತರಂಗಗಳು

(3) ಆಡಿಯೋ (ಶ್ರವಣ) ತರಂಗಗಳು

(4) ಮೈಕ್ರೋ(ಸೂಕ್ಷ್ಮ) ತರಂಗಗಳು



Scanned by CamScanner

94. ಕೆಳಗಿನ ಯಾವುದು 2019 ರ ರಾಷ್ಟ್ರೀಯ ವಿಜ್ಞಾನ ದಿನದ ಆಶಯವಾಗಿದೆ ?

(1) ವಿಜ್ಞಾನ ಜನರಿಗಾಗಿ ಮತ್ತು ಜನರು ವಿಜ್ಞಾನಕ್ಕಾಗಿ

(2) ವಿಜ್ಞಾನ ಮತ್ತು ತಂತ್ರಜ್ಞಾನ ಸುಸ್ಥಿರ ಭವಿಷ್ಯಕ್ಕಾಗಿ

(3) ಎಲ್ಲರಿಗಾಗಿ ವಿಜ್ಞಾನ

(4) ಬಾಹ್ಯಾಕಾಶ ವಿಜ್ಞಾನ

95. ಉದ್ದ (L) ಮತ್ತು ಬಾಬ್ (ತೂಕದ ಗುಂಡಿನ) ದ್ರವ್ಯ ರಾಶಿಯ (m) ನ್ನು ಹೊಂದಿದ ಒಂದು ಸರಳ ಲೋಲಕವು ಒಂದು ನಿಗದಿತ ಸಮಯ (T) ದಲ್ಲಿ ತೂಗಾಡುತ್ತದೆ. ಬಾಬ್ ದ್ರವ್ಯರಾಶಿಯನ್ನು ಅದರ ಮೂಲ ದ್ರವ್ಯರಾಶಿಗಿಂತ ಎರಡು ಪಟ್ಟು ಹೆಚ್ಚಿಸಿದಲ್ಲಿ, ಆಗ ಆಂದೋಳನದ ಸಮಯವು (ಅವಧಿ) ಎಷ್ಟು ?

(1) ಅರ್ಧದಷ್ಟು ಕಡಿಮೆಯಾಗುವುದು.

(2) ಎರಡು ಪಟ್ಟು ಹೆಚ್ಚಾಗುವುದು.

(3) ಅಷ್ಟೇ ಉಳಿಯುವುದು.

(4) ನಾಲ್ಕು ಪಟ್ಟು ಹೆಚ್ಚಾಗುವುದು.

96. ಈ ಕೆಳಗಿನ ಯಾವ ತರಂಗಗಳನ್ನು ದೂರದರ್ಶನ ದೂರ ನಿಯಂತ್ರಣದಲ್ಲಿ ಸಾಮಾನ್ಯವಾಗಿ ಬಳಸಲಾಗುತ್ತದೆ ?

(1) ರೇಡಿಯೋ ತರಂಗಗಳು

(2) (ಅಲ್ಟ್ರಾಸಾನಿಕ್) ಶ್ರವಣಾತೀತ ತರಂಗಗಳು

(3) ಅವಕೆಂಪು ತರಂಗಗಳು

(4) ಲೇಸರ್ ತರಂಗಗಳು

97. ಸಮುದ್ರದ ನೀರನ್ನು ವಿಲವಣೀಕರಣಗೊಳಿಸಲು ಬಳಕೆ ಆಗುವ ತಂತ್ರ ಈ ಕೆಳಗಿನವುಗಳಲ್ಲಿ ಯಾವುದು ?

(1) ವಿಸರಣ

(2) ಎಲೆಕ್ಟ್ರೋಫೊರೆಸಿಸ್

(3) ವಿಪರ್ಯಯ ಪರಾಸರಣ

(4) ಡಯಾಲಿಸಿಸ್

98. ಗಾಳಿ–ಬೆಳಕಿನ ಕೊರತೆಯಿರುವ ಕಟ್ಟಡಗಳಲ್ಲಿ, ಈ ಕೆಳಗಿನ ಯಾವ ಜಡ/ನಿಷ್ಕ್ರಿಯ ಅನಿಲವು ಸಂಚಯನಗೊಳ್ಳುತ್ತದೆ ?

(1) ಹೀಲಿಯಂ

(2) ನಿಯಾನ್

(3) ಆರ್ಗಾನ್

(4) ರೇಡಾನ್

99. ಕಲ್ಲುಹೂವುಗಳು ವಿಶೇಷವಾಗಿ ನಗರಗಳಲ್ಲಿನ ಮತ್ತು ಅವುಗಳ ಸುತ್ತಮುತ್ತಲಿನ ವಾಯು ಮಾಲಿನ್ಯಕ್ಕೆ ಸೂಚಕಗಳಾಗಿವೆ; ಅವು ಈ ಕೆಳಗಿನ ಯಾವ ಮಾಲಿನ್ಯಕಾರಕಕ್ಕೆ ಮುಖ್ಯವಾಗಿ ಸೂಕ್ಷ್ಮ ಸಂವೇದಿಕತೆಯುಳ್ಳವು ?

(1) ಕಾರ್ಬನ್ (ಇಂಗಾಲ) ಮೊನಾಕ್ಸೈಡ್

(2) ಕಾರ್ಬನ್ ಡೈಆಕ್ಸೈಡ್

(3) ಸಲ್ಫರ್ (ಗಂಧಕ) ಡೈಆಕ್ಸೈಡ್

(4) ನೈಟ್ರೋಜನ್ (ಸಾರಜನಕ) ಡೈಆಕ್ಸೈಡ್

100. ಈ ಕೆಳಗಿನ ಯಾವ ಸಸ್ಯ ಗುಂಪುಗಳು ದ್ಯುತಿಸಂಶ್ಲೇಷಣೆಯ ಅವಧಿಯಲ್ಲಿ ಕಡಿಮೆ ಪ್ರಮಾಣದ ನೀರನ್ನು ಬಳಸುತ್ತವೆ ?

(1) $C_3$ ಸಸ್ಯಗಳು

(2) $C_4$ ಸಸ್ಯಗಳು

(3) CAM ಸಸ್ಯಗಳು

(4) ಮೇಲಿನ ಎಲ್ಲವೂ



knclingarajuedu.com
Scanned by CamScanner